ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ -19

5ನೇ ವರ್ಷ 7ನೇ ಸಂಚಿಕೆ ಕೊಪ್ಪ 5-10-1986 ಭಾನುವಾರ ಬೆಲೆ 20 ಪೈಸೆ

ದೂಬಳ ಸುತ್ತಮುತ್ತ ಹುಲಿ ಹಾವಳಿ

ಜಯಪುರ: ಇಲ್ಲಿಗೆ ಸಮೀಪದ ದೂಬಳ ಎಸ್ಟೇಟ್ ಸುತ್ತಮುತ್ತಲ ಹಳ್ಳಿಗಳಲ್ಲಿ ಕಳೆದ ಒಂದು ತಿಂಗಳಿಂದೀಚೆಗೆ ಹುಲಿ ಹಾವಳಿ ಆರಂಭವಾಗಿದ್ದು, ಐದಾರು ದನಕರುಗಳು ಈಗಾಗಲೇ ಅದಕ್ಕೆ ಆಹುತಿಯಾಗಿವೆ. ಇಲ್ಲಿನವರಿಗೆ ಇದು ಹೊಚ್ಚ ಹೊಸ 'ಅನುಭವ'ವಾಗಿದ್ದು, ರೈತರು ಹೌಹಾರಿದ್ದಾರೆ.

ಸಿಗದಾಳಿನಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ಅತ್ಯಾಚಾರವೆಸಗಿದವನ ಉಚ್ಚಾಟನೆಗೆ ಆಗ್ರಹ

ಹರಿಹರಪುರ : ಇಲ್ಲಿಗೆ ಸಮೀಪದ ಸಿಗದಾಳಿನಲ್ಲಿ ಸೆ. 29ರಂದು ರಾಮ ಎಂಬ ಕೃಷಿ ಕಾರ್ಮಿಕನು (ಸುಮಾರು 45 ವರ್ಷ) 6ನೇ ತರಗತಿ ಓದುತ್ತಿರುವ 12 ವರ್ಷದ ಬಾಲಕಿಯೊಬ್ಬಳ ಮೇಲೆ ಅತ್ಯಾಚಾರವೆಸಗಿರುವುದಾಗಿ ದೂರಲಾಗಿದೆ.

ಶಾಲೆ ಮುಗಿಸಿ ಸಂಜೆ 4.30ರ ಹೊತ್ತಿಗೆ ಶಾಲೆಯಿಂದ ಕೇವಲ 2 ಫರ್ಲಾಂಗ್ ದೂರವಿರುವ ತನ್ನ ಮನೆಗೆ ಕಾಡಿನ (ಹಾಡ್ಯದ) ದಾರಿಯಲ್ಲಿ ಈಕೆ ಒಬ್ಬಳೇ ಹೋಗುತ್ತಿದ್ದಾಗ ತಿಂಡಿಯ ಆಸೆ ತೋರಿಸಿ ಆತ ಈಕೆಯನ್ನು ಗಿಡಗಳ ಮರೆಗೆ ಎಳೆದೊಯ್ದುದಾಗಿಯೂ, ಆಕೆಯ ಆಕ್ರಂದನವನ್ನು ಕೇಳಿದ ಆಕೆಯ ಅಣ್ಣ ಓಡಿ ಹೋಗಿ ಅವಳನ್ನು ಪಾರು ಮಾಡಿದ್ದಾಗಿಯೂ ತಿಳಿದು ಬಂದಿದೆ.

ತೀರ ಬಡ ಕುಟುಂಬದ ಈಕೆಯ ಅಣ್ಣ[...]ದಿರು ಹರಿಹರಪುರ ಠಾಣೆಯಲ್ಲಿ ದೂರು ನ[...]ಡಿದ್ದ., ಆಗ ಅಲ್ಲಿದ್ದ ದಫೇದಾರ್, ಸರಿಯಾ[...] ಸಾಕ್ಷಿ, ಪುರಾವೆ, ಮೆಡಿಕಲ್ ರಿಪೋರ್ಟು[...]ಗಳಿಲ್ಲದೆ ಈ ಮೊಕದ್ದಮೆ ನಿಲ್ಲುವುದಿಲ್ಲವೆಂದ[...] ಹೇಳಿದ್ದಾಗಿ ತಿಳಿದು ಬಂದಿದೆ. ಆದ್ದರಿಂದ[...] ಗ್ರಾಮಸ್ಥರೆಲ್ಲ ಸೇರಿ ಆ ವ್ಯಕ್ತಿ ಧರ್ಮಸ್ಥ[...]ಕ್ಕೆ 300 ರೂ. ತಪ್ಪು ಕಾಣಿಕೆ ಕಟ್ಟುವಂ[...] ನಿರ್ಣಯಿಸಿದ್ದಾಗಿ ಹೇಳಲಾಗಿದೆ.

ಈತ ಈ ಹಿಂದೆ 2-3 ಬಾರಿ ಅತ್ಯಾಚಾ[...]ರಗಳನ್ನು ಎಸಗಿರುವುದಾಗಿಯೂ, ಇವನ[...] ಉಪಟಳದಿಂದ ರೋಸಿದ್ದ ಕೆಲಮಂದಿ ಕೃಷಿ ಕಾರ್ಮಿಕ ಮಹಿಳೆಯರು ಹಿಂದೊಮ್ಮೆ ಈ[...]ನನ್ನು ಥಳಿಸಲು ಹೋಗಿದ್ದರೆಂದೂ ಹೇಳಲಾಗಿದೆ. ಈತನನ್ನು ಗ್ರಾಮದಿಂದ ಉಚ್ಚಾಟಿಸಲು ಜನ ಆಗ್ರಹಿಸಿದ್ದಾರೆ.

ಹರಿಹರಪುರದಲ್ಲಿ 'ಪೋಲೀಸ್ ದೌರ್ಜನ್ಯ'ಕ್ಕೆ ಬಿ.ಜೆ.ಪಿ. ಪ್ರತಿಭಟನೆ- ಮಾಹಿತಿ, ಅಭಿಪ್ರಾಯಗಳ ವಿಚಾರ ಮಂಥನ

ಹರಿಹರಪುರ : ಇಲ್ಲಿನ ಪೋಲೀಸರಿಂದ ನಿರಪರಾಧಿ ಬಡಜನರ ಮೇಲೆ ದೌರ್ಜನ್ಯ, ಕಿರುಕುಳ ನಡೆಯುತ್ತಿದೆಯೆಂದು ಆರೋಪಿಸಿ, ಬಿಜೆಪಿಯ ತಾಲ್ಲೂಕು ಘಟಕ ಸೆ. 30ರಂದು ಇಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಸಭೆ ಏರ್ಪಡಿಸಿತ್ತು.

ಸುತ್ತಮುತ್ತಲ ಬಡವರು, ಕೃಷಿ ಕಾರ್ಮಿಕರು ಹಾಗೂ ಮಹಿಳೆಯರು ಅಧಿಕ ಸಂಖ್ಯೆಯಲ್ಲಿದ್ದ ಈ ಮೆರವಣಿಗೆಯ ನೇತೃತ್ವವನ್ನು ವಿ|| ಪರಿಷತ್‌ನ ಬಿಜೆಪಿ ಸದಸ್ಯ ಕರಂಬಳ್ಳಿ ಸಂಜೀವ ಶೆಟ್ಟಿ ವಹಿಸಿದ್ದರು. ಜಿಲ್ಲಾ ಬಿಜೆಪಿ ಪ್ರ|| ಕಾರ್ಯದರ್ಶಿ ಬಿ. ಎಸ್. ವಿಠಲ ರಾವ್, ತೀರ್ಥಹಳ್ಳಿಯಿಂದ ಆರಗ ಜ್ಞಾನೇಂದ್ರ, ನರಸಿಂಹ ನಾಯಕ್ ಮುಂತಾದವರು ಭಾಗವಹಿಸಿದ್ದರು.

ಸಭೆಯಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ರಘುನಾಥ್ ಪೋಲೀಸರಿಂದ ನಡೆದಿರುವುವೆನ್ನಲಾದ ಅನ್ಯಾಯ ಮತ್ತು ದೌರ್ಜನ್ಯಗಳನ್ನು ವಿವರಿಸಿದರು.

ಹರಿಹರಪುರದ ಹೈದರ್, ನೂರುಲ್ಲಾ ಮತ್ತು ಹಮೀದ್ ಎಂಬ ಯುವಕರು ಸಮೀಪದ ದೇವರ ಮನೆ ಎಂಬಲ್ಲಿಯ ಇಡೀ ಮುಸ್ಲಿಂ ಸಮುದಾಯಕ್ಕೆ ಜೀವ ಭಯ ಒಡ್ಡಿ ಅವರುಗಳು ಪೇಟೆಗೆ ಬರುವುದೇ ಅಸಾಧ್ಯವಾಗಿಸಿರುವುದಲ್ಲದೆ 1 ತಿಂಗಳ ಹಿಂದೆ ಅಲ್ಲಿನ ಮೂವರು ಹುಡುಗರ ಮೇಲೆ ವಿನಾಕಾರಣ ಹಲ್ಲೆ ನಡೆಸಿ, ತಾವೇ ಠಾಣೆಗೆ ದೂರು ನೀಡಿದಾಗ ಪುನಃ ಅವರುಗಳಿಗೇ ದಫೇದಾರ್ ನಾಚಪ್ಪ ತೀವ್ರವಾಗಿ ಹೊಡೆದು ಕೇಸು ಹಾಕಿದರೆಂಬುದು, ಹಾಗೂ ಬೇಳಿಗದ್ದೆಯ ರಾಮಣ್ಣ ಗೌಡ ಎಂಬ ವೃದ್ಧರು ಸಬ್ ಇನ್‌ಸ್ಪೆಕ್ಟರ್‌ರಿಗೆ "ನಮಸ್ಕಾರ ಸ್ವಾಮಿ...." ಎಂದು ಹೇಳಿದ್ದನ್ನು ಅಪಾರ್ಥ ಮಾಡಿಕೊಂಡು ಅವರ ಮೇಲೆ ಹಲ್ಲೆ ನಡೆಸಿ, ಪೆಟ್ಟಿ ಕೇಸ್ ಹಾಕಿ, ಕಿರುಕುಳ ಕೊಟ್ಟರೆಂಬುದು ಪ್ರಮುಖ ಆಪಾದನೆಗಳಾಗಿದ್ದವು.

ಜೊತೆಗೆ, ಹಲ್ಲೆಗೊಳಗಾಗಿದ್ದ ಬಂಡಿಗಡಿ ಹೊಸೂರಿನ ಕಿಟ್ಟ ಪೂಜಾರಿ ಎಂಬ ಬಡವರ ಮೇಲೆ ಕೇಸು ಹಾಕಿ, ಹಲ್ಲೆಕೋರರ ಮೇಲೆ ಕೇಸು ಹಾಕದಿದ್ದುದು, ಹಮಾಲಿಗಳ ಮೇಲೆ, ವಾಹನ ಚಾಲಕರ ಮೇಲೆ ಕೇಸುಗಳು, ಸೌದೆ ಕಡಿಯುತ್ತಿದ್ದ ಕೃಷಿ ಕಾರ್ಮಿಕರ ಮೇಲೆ ಪೋಲೀಸರೊಬ್ಬರ ಹಲ್ಲೆ, ಕಳೆದ ವರ್ಷ ಬೇಗಾನೆಯ ರೈತರೊಬ್ಬರಲ್ಲಿ ಸಬ್ ಇನ್ಸ್‌ಪೆಕ್ಟರು ಪೋಲೀಸ್ ಕ್ಷೇಮ ನಿಧಿಗೆ ದೇಣಿಗೆ ಒತ್ತಾಯಿಸಿ ಟೆಲ್ಲರಿನ ಮೇಲೆ ಕೇಸುಗಳನ್ನು ಹಾಕಿದರೆಂಬುದು—ಇವೇ ಮುಂತಾದುವು ಇನ್ನಿತರ ಪ್ರಮುಖ ಆರೋಪಗಳಾಗಿದ್ದವು.

ಅಲ್ಲದೆ, ಕೆಲಮಂದಿ ಪೋಲೀಸರು, ಸಾಮಾನ್ಯವಾಗಿ ಸಮಾಜದಲ್ಲಿ ಅನುಮಾನಾಸ್ಪದ ಅಥವಾ ನ್ಯಾಯಬಾಹಿರ ವ್ಯಕ್ತಿತ್ವವುಳ್ಳವರೆಂದು ಗುರ್ತಿಸಲ್ಪಡುವವರ ಜೊತೆಯಲ್ಲಿ (ಅವರ ಖರ್ಚಿನಲ್ಲಿ) ಮದ್ಯಪಾನ ಮಾಡುವುದು ಮುಂತಾದ ಆರೋಪಗಳೂ ಇದ್ದವು.

ಇದೇ ವಾರದಲ್ಲಿ, ಕೊಪ್ಪ ವಲಯ ಅರಣ್ಯಾಧಿಕಾರಿಗಳು 4 ಜನ ಹರಿಜನರನ್ನು ಬೇಲಿ ತಂತಿ ಕಳವಿನ ಆರೋಪದ ಮೇಲೆ ಬಂಧಿಸಿ ಹಿಂಸಿಸುತ್ತಿದ್ದಾಗ ಅವರ ಪತ್ನಿಯರು ಅವರನ್ನು ಹುಡುಕಿಸಿಕೊಡಬೇಕೆಂದು ಪೋಲೀಸರಿಗೆ ಕೊಟ್ಟ ದೂರನ್ನು ಸ್ವೀಕರಿಸಲು ನಿರಾಕರಿಸಿ, ಅವರುಗಳು ಎಸ್ಪಿಗೆ ದೂರು ನೀಡಿದ್ದು ತಿಳಿದಾಗ ಪುನಃ ಬಂದು ಅವರಿಂದ ಹೇಳಿಕೆ ರೂಪದಲ್ಲಿ ದೂರು ಪಡೆದಿದ್ದೂ ಒಂದು ಪ್ರಮುಖ ಆಪಾದನೆಯಾಗಿತ್ತು.

ಪೋಲೀಸರು ಆಳುವ ಪಕ್ಷದವರ ಚಿತಾವಣೆಯಿಂದ ಇತರ ಪಕ್ಷಗಳ ಕಾರ್ಯಕರ್ತರು ಮತ್ತು ಬೆಂಬಲಿಗರಿಗೆ ಕಿರುಕುಳ ಕೊಡುತ್ತಿರುವುದಾಗಿಯೂ ಆರೋಪಿಸಿದ ರಘುನಾಥ್ ಇದನ್ನು ಸಾಮೂಹಿಕವಾಗಿ ಎದುರಿಸುವುದಾಗಿ ಘೋಷಿಸಿದರು.

ಸಾರ್ವಜನಿಕ ಅಭಿಪ್ರಾಯ

ಈ ಆಪಾದನೆಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು 'ಮುಂಜಾವು' ಒಂದು ವಾರ ಸತತವಾಗಿ, ವ್ಯಾಪಕವಾಗಿ ಮಾಹಿತಿ ಮತ್ತು ಅಭಿಪ್ರಾಯ ಸಂಗ್ರಹಿಸಿದಾಗ ಹೆಚ್ಚಿನ

(2ನೇ ಪುಟಕ್ಕೆ)

ಕಳೆದ ವಾರ ಸಕಲೇಶಪುರದಲ್ಲಿ

ಮಲೆನಾಡು ಏಲಕ್ಕಿ ಧಾರಣೆ

ರಾಶಿ: 120-150

ಆರಿಸಿದ್ದು : 180-190

ಕಾರ್ಮಿಕರ ಹಕ್ಕು ಮುರಿಯಲು ಜ್ವಾಲಾಮುಖಿ ಆವಾಹನೆ!

ಕೊಪ್ಪ: ಶಂಕರ್ ಸಾರಿಗೆ ಸಂಸ್ಥೆಯ ಕಾನೂನುಬದ್ಧ ಕಾರ್ಮಿಕ ಸಂಘವನ್ನು ಮುರಿಯುವ ನೀತಿಬಾಹಿರ 'ಕಾರ್ಯಕ್ರಮ' ಭರದಿಂದ ಮುನ್ನಡೆದಿದೆ.

ಗಾಂಧೀ ಜಯಂತಿಯ ಹಿಂದಿನ ದಿನ ಚಿಕ್ಕಮಗಳೂರಲ್ಲಿ ಸಂಘದ ಮುಖಂಡ ಸಂಜೀವ ಅವರನ್ನು ಸಹೋದ್ಯೋಗಿಯೊಂದಿಗೆ ಜಗಳವಾಡಿದ ದೂರಿನ ಮೇಲೆ ಅನಿರೀಕ್ಷಿತವಾಗಿ ಬಂಧಿಸಿ 2 ದಿನ ನ್ಯಾಯಾಂಗ ಬಂಧನಕ್ಕೊಳಪಡಿಸಲಾಗಿತ್ತು. ಶನಿವಾರ ಆತನನ್ನು ಜಾಮೀನಿನ ಮೇಲೆ ಬಿಡಿಸಿಕೊಂಡು ಬಂದಿದ್ದು, ಈ ದೂರನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆಂದು ತಿಳಿದು ಬಂದಿದೆ. ಇದಕ್ಕಾಗಿ ತೆರಳಿದ್ದವರನ್ನು ಸೇರಿಸಿ ಮತ್ತೊಂದು ದೂರು ನೀಡಲಾಗಿದೆ!

ಇತ್ತ, ಈಚಿನ ಮುಷ್ಕರದ ವೇಳೆ 'ಕೆಲಸ' ಮಾಡಿ ಸೀರೆ ವಗೈರೆ ಗಿಟ್ಟಿಸಿಕೊಂಡು ಕಾರ್ಮಿಕರಿಂದ "ಚ....ಚಾ"ಗಳೆಂದು ಕರೆಸಿಕೊಂಡಿದ್ದವರನ್ನು ಸೇರಿಸಿ ಆಸಗೋಡು ವಾಸಪ್ಪಗೌಡ, ಕೆ.ವಿ. ಮಂಜುನಾಥ ಶೆಟ್ಟಿ ಮುಂತಾದವರು ಮತ್ತೊಂದು "ಕಾರ್ಮಿಕ ಸಂಘ"ವೆಂಬುದನ್ನು ಸ್ಥಾಪಿಸಿದ್ದಾರೆ. ಈ ಇದಕ್ಕೆ ಲೋಕದ ಕಣ್ಣಲ್ಲಿ ಮಾನ್ಯತೆಗಳಿಸಿಕೊಳ್ಳಲು "ಖ್ಯಾತ ಸಮಾಜವಾದಿ" ಮೈಕೆಲ್ ಫರ್ನಾಂಡಿಸ್‌ರವರ ಎಚ್.ಎಂ.ಕೆ.ಪಿ. ಎಂಬ ಕಾರ್ಮಿಕ ಸಂಘಟನೆಗೆ ಅದನ್ನು ಸೇರ್ಪಡೆಗೊಳಿಸಲಾಗಿದೆ.

ತಮ್ಮ ಕುಂದು-ಕೊರತೆಗಳ ನಿವಾರಣೆಗಾಗಿ ಸಂಘ ರಚಿಸಿಕೊಳ್ಳುವ ಕಾರ್ಮಿಕರ ಹಕ್ಕನ್ನು ಮುರಿಯಲು ಪಟ್ಟಭದ್ರ ಹಿತಸಕ್ತಿಗಳು ಜ್ವಾಲಾಮುಖಿಯೊಂದನ್ನು ಆವಾಹಿಸತೊಡಗಿದ್ದಾರೆ....

ನ.ರಾ. ಪುರದಲ್ಲಿ ರಬ್ಬರ್ ಕೃಷಿ ವಿಚಾರ ಸಂಕಿರಣ

ನ. ರಾ. ಪುರ: ಇಲ್ಲಿನ ಭೂ ಅಭಿವೃದ್ಧಿ ಬ್ಯಾಂಕ್ ಆಶ್ರಯದಲ್ಲಿ ಅ. 8ರಂದು ಮಧ್ಯಾಹ್ನ 2ರಿಂದ 5ರವರೆಗೆ ರಬ್ಬರ್ ಕೃಷಿ ವಿಚಾರ ಸಂಕಿರಣ ನಡೆಯಲಿದ್ದು, ರಬ್ಬರ್ ಬೋರ್ಡಿನ ತಜ್ಞರು ಹಾಗೂ ಅನುಭವಿ ರಬ್ಬರ್ ಕೃಷಿಕರು ಭಾಗವಹಿಸುತ್ತಾರೆ.

ಕೊಪ್ಪ ಮೀನು ಮಾರ್ಕೆಟ್ ಬೆಂಕಿಗಾಹುತಿ

ಕೊಪ್ಪ: ಇಲ್ಲಿನ ಮೀನು ಮಾರ್ಕೆಟ್‌ನಲ್ಲಿ ಸೆ. 3ರಂದು ಬೆಂಕಿ ಆಕಸ್ಮಿಕವುಂಟಾಗಿ ಮೀನು ಮಾರುವ ಅಂಗಡಿಗಳೂ ಒಣ ಮೀನುಗಳು ಸುಟ್ಟು ಸಾವಿರಾರು ರೂ.ಗಳ ನಷ್ಟವುಂಟಾಯಿತು. ಈ ಬಗ್ಗೆ ಗರಿಷ್ಠ ಪರಿಹಾರಕ್ಕಾಗಿ ಸಂತ್ರಸ್ತರು ಒತ್ತಾಯಿಸಿದ್ದಾರೆ.

ಎನ್. ಎಸ್. ಎಸ್. ಶಿಬಿರ

ಶೃಂಗೇರಿ: ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಅ. 6ರಿಂದ 15ರವರೆಗೆ ಕಮ್ಮರಡಿಯಲ್ಲಿ ನಡೆಯುತ್ತದೆ.

'ಪೋಲೀಸ್ ದೌರ್ಜನ್ಯ': ಮಾಹಿತಿ, ಅಭಿಪ್ರಾಯಗಳ ಮಂಥನ

(1ನೇ ಪುಟದಿಂದ)

ಜನರ ಅಭಿಪ್ರಾಯ, "ತಪ್ಪುಗಳಾಗಿರಬಹುದು; ಆದರೆ ಈ ಮಟ್ಟದ 'ಪ್ರತಿಭಟನೆ' ಎಂಬುದು ಅತ್ಯಂತ ಉತ್ಪ್ರೇಕ್ಷಿತ ಹಾಗೂ ಬೇರೆ ಉದ್ದೇಶದಿಂದ ಕೂಡಿದ್ದು" ಎಂಬುದಾಗಿತ್ತು.

ಬಹುತೇಕ ಸಾರ್ವಜನಿಕರ ಅಭಿಪ್ರಾಯದಲ್ಲಿ, ಸಬ್ ಇನ ಸ್ಪೆಕ್ಟರ್ ದುಗ್ಗಪ್ಪ ಸಾಕಷ್ಟು ಸೌಜನ್ಯದಿಂದಲೇ ಸಾರ್ವಜನಿಕರೊಂದಿಗೆ ವರ್ತಿಸುತ್ತಾರೆ. ತನಗೆ ತಿಳಿದಂತೆ, ಲಂಚ ತೆಗೆದುಕೊಂಡ ಉದಾಹರಣೆಗಳು ಇಲ್ಲ. ಯಾರಲ್ಲೂ ಅತಿಯಾದ 'ಬಳಕೆ' ಇಟ್ಟುಕೊಂಡಿಲ್ಲ. ರಾಜಕೀಯ ಪಕ್ಷದವರನ್ನು ಅತಿಯಾಗಿ ಹತ್ತಿರ ಸೇರಿಸುವುದಿಲ್ಲ. ದೊಡ್ಡ ದೊಡ್ಡವರ ಮನೆಯಲ್ಲಿ ಕುಡಿತದ 'ಪಾರ್ಟಿ' ಮಾಡುವುದಿಲ್ಲ. ಇಷ್ಟೆಲ್ಲ ಇರುವಾಗ, ಏನಾದರೂ ತಪ್ಪುಗಳಾಗಿದ್ದರೆ ರಾಜಕೀಯ ಬದಿಗಿಟ್ಟು, ನ್ಯಾಯ ರೀತಿಯಲ್ಲಿ ವ್ಯವಹರಿಸಿದ್ದರೆ ಇಷ್ಟೆಲ್ಲಾ ಹಗರಣದ ಅಗತ್ಯವೇ ಇರುತ್ತಿರಲಿಲ್ಲ. ಕೆಲ ಮಂದಿ ಮುಖಂಡರು ಈ ಹಿಂದೆಲ್ಲ—ಇಲ್ಲಿ ಔಟ್ ಪೋಸ್ಟ್ ಮಾತ್ರ ಇದ್ದಾಗ– ಠಾಣೆಯ ವ್ಯವಹಾರವನ್ನು ಕಂಟ್ರೋಲ್ ಮಾಡುತ್ತಿದ್ದರು. ಈ ಸಬ್ ಇನ್ಸ್ಪೆಕ್ಟರ್ ಅಂಥದಕ್ಕೆ ಅವಕಾಶ ಕೊಡದಿರುವುದರಿಂದ, ತಮ್ಮ 'ಪ್ರಭಾವ' ತಗ್ಗಿದ್ದನ್ನು ಸಹಿಸಲಾರದ ಕೆಲವರು ಇಷ್ಟೆಲ್ಲ ಗಲಾಟೆಗೆ ಕಾರಣರಾಗುತ್ತಿದ್ದಾರೆ. ಇಂಥ 'ಹಸ್ತ ಕ್ಷೇಪ' ಸಾರ್ವಜನಿಕ ಶಾಂತಿಗೆ ಖಂಡಿತಾ ಹಿತಕರವಲ್ಲ.... ಎಂಬ ಮಾತು ವ್ಯಾಪಕವಾಗಿ ಕೇಳಿ ಬಂತು.

ಹೀಗೆ ಅಭಿಪ್ರಾಯ ವ್ಯಕ್ತ ಪಡಿಸಿದವರಲ್ಲಿ ಹೆಚ್ಚಿನವರು ಬಿಜೆಪಿ ಬೆಂಬಲಿಗರೇ ಆಗಿರುವುದೊಂದು ವಿಶೇಷ. ಇವರಿಗೆಲ್ಲಾ ಎಲ್ಲೋ ತಪ್ಪು ಅಭಿಪ್ರಾಯ (ಮಿಸ್‌ಗೈಡ್) ಉಂಟಾಗಿರಬೇಕು ಎನ್ನುತ್ತಾರೆ ರಘುನಾಥ್. "ದೂರು ಕೊಡಲು ಹೋದವರ ಮೇಲೇ ಹರಿಹಾಯುತ್ತಾರಂತೆ ಎಸ್ಸೈ" ಎಂತಲೂ ಒಬ್ಬಿಬ್ಬರು ಹೇಳಿದ್ದಾರೆ.

ದೇವರ ಮನೆಯ ಹುಡುಗರಿಗೆ ದಫೇದಾರ್ ನಾಚಪ್ಪ ಹೊಡೆಯುತ್ತ ಠಾಣೆಗೆ ಎಳೆದೊಯ್ದುದು ನಿಜ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಇದಕ್ಕೆ 1 ವರ್ಷದ ಮೊದಲು ದೇವರ ಮನೆಯವರು ಹಮೀದನ ಮೇಲೆ ಹಲ್ಲೆ ನಡೆಸಿದ್ದನ್ನೂ ಉಲ್ಲೇಖಿಸುವ ಸಾರ್ವಜನಿಕರು, "ಕೆಲ ಮಂದಿ ಪೋಲೀಸರು ಮತ್ತು ದಫೇದಾರರು ಮಾತ್ರ ಲಂಚ, ಕುಡಿತ, ದೂರು ಕೊಡ ಹೋದವರಿಗೇ ಕೇಸು ಹಾಕುವುದು ಮುಂತಾದುವುಗಳಲ್ಲಿ ನಿರತರಾಗಿರುವುದು ನಿಜ. ಇವರ ಚಟುವಟಿಕೆಗಳು ಎಸ್ಸೈಗೆ ಯಾಕೆ ಗೊತ್ತಾಗುವುದಿಲ್ಲವೋ. ಎಸ್ಸೈ ಕೂಡ ಒಂದು ವೇಳೆ ತಪ್ಪು ಮಾಡಿರಬಹುದು. ಆದರೆ ಅವರನ್ನು 'ದುಷ್ಟ, ನೀಚ' ಎನ್ನುವುದು ಮಾತ್ರ ಬಹಳ ಅಪಚಾರ" ಎನ್ನುತ್ತಾರೆ.

ಬೇಳೆಗದ್ದೆ ರಾಮಣ್ಣಗೌಡರ ಪ್ರಕರಣದ ಬಗ್ಗೆ ಕೆಲ ಮಂದಿ ಕಟ್ಟಾ ಬಿಜೆಪಿ ಅಭಿಮಾನಿಗಳು ಹಾಗೂ ರಘುನಾಥ್‌ರವರ ಆಪ್ತರು ಹೇಳಿದ್ದು— "ಹಿಂದೆ ಅವರ ಮೇಲೆ 'ಪೆಟ್ಟಿ ಕೇಸ್' ಹಾಕಿದ್ದಾರೆ' ಎಂದಷ್ಟೇ ಹೇಳ್ತಿದ್ದರು. ಈಗ ನೋಡಿದರೆ 'ಹಲ್ಲೆ ಮಾಡಿದ್ದಾರೆ' ಎನ್ನುತ್ತಿದ್ದಾರೆ. ಎಷ್ಟು ಸತ್ಯವೋ ಎಷ್ಟು ಸುಳ್ಳೋ ಗೊತ್ತಾಗುವುದಿಲ್ಲ ಮಾರಾಯರೆ....!"

ಸಬ್ ಇನ್ಸ್ಪೆಕ್ಟರ್ ವಿವರಣೆ

"ಕಳೆದ ವರ್ಷ ಸತೀಶ್ಚಂದ್ರ ಕಂಪೆನಿಯ ಜೀಪು ಒಬ್ಬ ಹರಿಜನ ಬಾಲಕಿಗೆ ಡಿಕ್ಕಿಯಾಗಿ ಕೇಸ್ ಆದಾಗ ಇದೇ ರಾಮಣ್ಣ ಗೌಡರ ಮಗ ಸುಧಾಕರ ಬಂದು ರಾಜಿ ಮಾಡಿಸಿ ಜೀಪು ಬಿಡಬೇಕೆಂದು ಒತ್ತಾಯಿಸಿದ. ಅದು ಆಗುವುದಿಲ್ಲವೆಂದು ಎಷ್ಟು ಮನವರಿಕೆ ಮಾಡಿದರೂ ಕೇಳದಿದ್ದಾಗ ಜೋರು ಮಾಡಿ ಕಳಿಸಬೇಕಾಯಿತು. ಬಹುಶಃ ಅದೇ ಸೇಡಿನಿಂದ ಇರಬೇಕು — ನಾವು 'ಸಂಚಾರ ಸುರಕ್ಷತಾ ಸಪ್ತಾಹ'ದ ವೇಳೆ ಒಂದು ಬಸ್ಸಿನ ಪರಿಶೀಲನೆಯಲ್ಲಿದ್ದಾಗ ರಾಮಣ್ಣ ಗೌಡರು ಬಂದು ಅವಾಚ್ಯವಾಗಿ 'ಪೋಲೀಸ'ರನ್ನು ನಿಂದಿಸತೊಡಗಿದರು. ಒಳ್ಳೆಯ ಮಾತಿಗೆ ಸುಮ್ಮನಾಗದಿದ್ದಾಗ ಅವರ ಮೇಲೆ ಪೆಟ್ಟಿ ಕೇಸು ಹಾಕಿದ್ದು...."

"ನಾನು ಯಾರಿಗೂ ಹೊಡೆಯುವುದಿಲ್ಲ. ಏನಿದ್ದರೂ ಕಾನೂನಿನಂತೆ ಕೆಲಸ ಮಾಡುತ್ತೇನೆ. ಕೇಸು ಹಾಕುತ್ತೇನೆ. ಹಾಗೆ ಸ್ವಲ್ಪವೂ ಗದರಿಸದೆ, ಜೋರು ಮಾಡದೆ ಅಪರಾಧಿಗಳನ್ನು ಹತೋಟಿಯಲ್ಲಿಡಲು ಸಾಧ್ಯವಿಲ್ಲ. ಕೇಸನ್ನೂ ಹಾಕುವುದು ಬೇಡ ಎಂದು ಇವರು ಮೇಲಿಂದ ಆದೇಶ ತರಲಿ. ಅದರಂತೆ ನಡೆಯುತ್ತೇನೆ...." ಎಂದು ವಿಷಾದದಿಂದ ಹೇಳುತ್ತಾರೆ ಸಬ್ ಇನ್ಸ್ಪೆಕ್ಟರ್ ಎಚ್. ಟಿ. ದುಗ್ಗಪ್ಪ.

ಈ ಮಧ್ಯೆ, ಅಂದಿನ ಪ್ರತಿಭಟನೆಯಲ್ಲಿ ಪಾಲ್ಗೊಂಡವರಿಗೆ ಪೋಲೀಸರು ಕಿರುಕುಳ ಕೊಡಲು ಪ್ರಾರಂಭಿಸಿರುವುದಾಗಿಯೂ, ಅವರು ತಮ್ಮ ತಪ್ಪನ್ನು ತಿದ್ದಿಕೊಳ್ಳದೆ ದೌರ್ಜನ್ಯ ಮುಂದುವರಿಸಿದಲ್ಲಿ ತಮ್ಮ ಪಕ್ಷ ಇದನ್ನು ತೀವ್ರವಾಗಿ ಪರಿಗಣಿಸಿ ಮುಂದಿನ ನಿರ್ಧಾರ ಕೈಗೊಳ್ಳ ಬೇಕಾಗುತ್ತದೆಂದೂ ರಘುನಾಥ್ ಹೇಳಿಕೆಯಿತ್ತಿದ್ದಾರೆ. ●

ಹೊಸಕೊಪ್ಪ ಕ|| ಬ್ಯಾಂಕ್ ನೂತನ ಕಟ್ಟಡಕ್ಕೆ

ಹೊಸಕೊಪ್ಪ: ಇಲ್ಲಿನ ಕರ್ನಾಟಕ ಬ್ಯಾಂಕ್ ಶಾಖೆಗಾಗಿ ಪಡೆಯಲಾಗಿರುವ ನೂತನ ಕಟ್ಟಡವನ್ನು ಹರಿಹರಪುರ ಸ್ವಾಮೀಜಿ ಸೆ. 25ರಂದು ಉದ್ಘಾಟಿಸಿದರು. ಎ. ರಮೇಶ ರಾವ್ ಅಧ್ಯಕ್ಷತೆ ವಹಿಸಿದ್ದು, ಪಿ. ಜಿ. ಗುರ್ಜರ್ ಜ್ಯೋತಿ ಬೆಳಗಿಸಿದರು. ಜಯಲಕ್ಷ್ಮಿ ವಾಸಪ್ಪ ಗೌಡ ಮತ್ತು ಬ್ಯಾಂಕಿನ ಜನರಲ್ ಮ್ಯಾನೇಜರ್ ಎಚ್. ಎಂ. ಶಾಮರಾವ್ ಮುಖ್ಯ ಅತಿಥಿಗಳಾಗಿದ್ದರು. ಶಿವಮೊಗ್ಗ ಪ್ರಾದೇಶಿಕ ಮ್ಯಾನೇಜರ್ ಕೆ. ನಾರಾಯಣ ಸ್ವಾಗತಿಸಿ, ಶಾಖಾ ಮ್ಯಾನೇಜರ್ ಎ. ರಾಘವಾಚಾರ್ ವಂದಿಸಿದರು.

ಕೊಪ್ಪ ಯುವ ಕಾಂಗ್ರೆ ಸಭೆ

ಕೊಪ್ಪ: ಇಲ್ಲಿನ ಯುವ ಕಾಂಗ್ರೆಸ್ ಸಭೆ ಅ. 3ರಂದು ಜಿ.ಎಸ್. ನಾಗೇಶ್ ಅಧ್ಯಕ್ಷತೆಯಲ್ಲಿ ನಡೆದು, ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಯತ್ನವನ್ನು ಖಂಡಿಸಲಾಯಿತು.

ಜಿಲ್ಲಾ ಸಮಿತಿ ಯೋಜಿಸಿರುವ ಜಿಲ್ಲಾ ಮಟ್ಟದ ಯುವ ಮೇಳವನ್ನು ಯಶಸ್ವಿಗೊಳಿಸಲು ನಿರ್ಧರಿಸಲಾಯಿತಲ್ಲದೆ, ಮಂಡಲ ಪಂಚಾಯ್ತಿ ಚುನಾವಣೆಗಳಿಗೆ ಯುವ ಅಭ್ಯರ್ಥಿಗಳ ಪಟ್ಟಿ ಶೀಘ್ರವಾಗಿ ಜಿಲ್ಲಾ ಸಮಿತಿಗೆ ಕಳಿಸಲೂ ನಿರ್ಣಯಿಸಲಾಯಿತು. ಮೀನು ಮಾರ್ಕೆಟ್ ಸಂತ್ರಸ್ತರಿಗೆ ಅತಿ ಹೆಚ್ಚಿನ ಪರಿಹಾರ ಕೊಡುವಂತೆ ಒತ್ತಾಯಿಸಲಾಯಿತು.

ಹೇರೂರು ಮಂಡಲ ಪಂಚಾಯ್ತಿ ಕಾಂಗ್ರೆ, ಜನತಾ ಸಮಿತಿಗಳು

ಕಾಂಗ್ರೆ: ಎಚ್.ಪಿ. ಚಂದ್ರಯ್ಯ ಹೆಗ್ಡೆ (ಅಧ್ಯಕ್ಷರು), ಎಚ್.ವಿ. ಶ್ರೀವತ್ಸ (ಕಾರ್ಯದರ್ಶಿ ಮತ್ತು 8 ಜನ ಸದಸ್ಯರು.

ಜನತಾ: ಎಚ್. ವಿ. ತಿಮ್ಮಪ್ಪ ಹೆಗ್ಡೆ (ಅಧ್ಯಕ್ಷರು), ಟಿ.ಟಿ. ರಾಮಪ್ಪ, ವಿಜೇಂದ್ರ ನಾಯಕ್ (ಉಪಾಧ್ಯಕ್ಷರು), ಎಂ. ಆರ್. ರಂಗನಾಥ್ (ಕಾರ್ಯದರ್ಶಿ) ಮತ್ತು 13 ಜನ ಸದಸ್ಯರು.

ಗ್ರಾಮೀಣ ಪ್ರದೇಶದಲ್ಲಿ ಇಂಜಿನಿಯರ್ ಸೇವೆ ಲಭ್ಯ

ಹರಿಹರಪುರ : ಇಲ್ಲಿನ ಪ್ರೌಢಶಾಲೆಯ ಹಳೇ ವಿದ್ಯಾರ್ಥಿಯಾದ ಸಮೀಪದ ಹೊಸಗೋಡಿನ ಬಾಲಚಂದ್ರ ಎಂಬ ಯುವ ಸಿವಿಲ್ ಎಂಜಿನೀರ್ ತನ್ನ ಸಧ್ಯದ ಬಿಡುವಿನ ವೇಳೆಯನ್ನು ಗ್ರಾಮೀಣ ಜನರ ಅಗತ್ಯಗಳಿಗಾಗಿ ವ್ಯಯಿಸಲು ನಿರ್ಧರಿಸಿದ್ದಾರೆ.

ಶೀರಾ ಕಡಿಮೆ ದರದಲ್ಲಿ ಕಟ್ಟಡಗಳ ಎಸ್ಟಿಮೇಟ್, ಮೌಲ್ಯ ನಿರ್ಧಾರ ಇತ್ಯಾದಿ ಮಾಡಿಕೊಡಲು ಇಚ್ಛಿಸಿರುವ ಅವರನ್ನು ಆಸಕ್ತರು ಎಸ್.ಎಲ್.ಬಂಗಾರು ಸ್ವಾಮಿ, ವ್ಯಾಪಾರಿಗಳು, ಹರಿಹರಪುರ ಇವರಲ್ಲಿ ಶನಿವಾರ ಮಧ್ಯಾಹ್ನ ಮತ್ತು ಭಾನುವಾರ ಸಂಜೆ ಸಂಪರ್ಕಿಸಬಹುದಾಗಿದೆ.

ಸಹಕಾರ ಸಂಘ ಉಪಯುಕ್ತವಾಗಿರಲಿ

ಭಂಡಿಗಡಿ : ಇಲ್ಲಿನ ಸಹಕಾರ ಸಂಘ ಹಣ ದುರುಪಯೋಗದ ವಿಷಯದಲ್ಲಿ ಈಗಾಗಲೇ ಖ್ಯಾತಿ ಪಡೆದಿದೆ. ಈಗಂತೂ ಕೆಲಕಾಲದಿಂದ ಪೂರ್ಣಾವಧಿ ಕಾರ್ಯದರ್ಶಿ ಇಲ್ಲ. ಕೇವಲ ಪಡಿತರ ವಸ್ತುಗಳನ್ನು ಮಾತ್ರ ತಂದು ಮಾರುವುದು ಇಲ್ಲಿರುವ ಸ್ವಯಂಸೇವಕ ಪದವೀಧರನೊಬ್ಬ. ಅಲ್ಲಿಗೆ ಬರುವ 4-6 ಮೂಟೆ ಅಕ್ಕಿ 1-2 ದಿನದಲ್ಲೇ ಖಾಲಿ. ಅಕ್ಕಪಕ್ಕದ ಅಂಗಡಿಗಳಲ್ಲಿ ಮಾರಾಟ ಆಗುತ್ತೆ ಎಂಬ ದೂರಿದೆ. ಇದಕ್ಕೆ ಅತನ ಉತ್ತರ:"ಹೌದು,ಅಂಗಡಿಗಳವರು 8-10 ಕಾರ್ಡು ತರ್ತಾರೆ. ನೀವೂ ತನ್ನಿ" ಇಬ್ಬರ ಕಾರ್ಡು ಇನ್ನೊಬ್ಬರು ತರುವುದನ್ನು ನಿಲ್ಲಿಸುವುದು, ಪಡಿತರ ಸಾಮಗ್ರಿ ಬರುವ ದಿನವನ್ನು ಹಳ್ಳಿಗರಿಗೆ ಮುಂಚಿತವಾಗಿ ತಿಳಿಸುವುದು, ಇತ್ಯಾದಿ ಕ್ರಮಗಳಿಂದ ಸಾಮಾನ್ಯ ಜನರಿಗೆ ಅಕ್ಕಿ ಇತ್ಯಾದಿ ದೊರೆಯುವಂತೆ ಮಾಡಲು ಕಾರ್ಯದರ್ಶಿ, ಜಾಗೃತ ಯುವಕರು, ತಹಸೀಲ್ದಾರರು ಗಮನ ಕೊಡಬೇಕಿದೆ. (ಮಲ್ನಾಡ್ ನ್ಯೂಸ್)

ಕೊಪ್ಪ ಮಂಡಲ ಜನತಾ ಮಹಿಳಾ ವಿಭಾಗ

ಕೊಪ್ಪ: ಇಲ್ಲಿನ ಮಂಡಲ ಪಂ|| ವ್ಯಾಪ್ತಿಯ ಜನತಾ ಪಕ್ಷದ ಮಹಿಳಾ ವಿಭಾಗ ಸ್ಥಾಪಿಸಲು ಸೆ. 30ರಂದು ಸಭೆ ಸೇರಿದ್ದ ಪಕ್ಷದ ಅಭಿಮಾನಿ ಮಹಿಳೆಯರು ನಿರ್ಧರಿಸಿದ್ದು ಈ ಬಗ್ಗೆ ಸದ್ಯವೇ ಇನ್ನೊಂದು ಸಭೆ ಕರೆಯಲಾಗುವುದೆಂದು ತಿಳಿದು ಬಂದಿದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ